**O.S**. 62/2016

ಡಿ ಡಬ್ಲ್ಯೂ–**1**

<u>ಸಾಕ್ಷಿಯನ್ನು ದಿಃ**26.02.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಜೆ ಕೆ ಎಂ ವಕೀಲರಿಂದಃ</u>**

ಕೋಮದಿಗೆ ಸಂಪೂರ್ಣ ಹಣ ಕೊಟ್ಟ ನಂತರ ಕ್ರಯದ ಕರಾರು ಪತ್ರವನ್ನು ರದ್ದು ಪಡಿಸಿಕೊಳ್ಳಲು ನಾವು ಪ್ರಯತ್ನ ಮಾಡಿಲ್ಲ. ಏಕೆಂದರೆ ಕೋಮದಿ ಸದರಿ ಕ್ರಯದ ಕ್ರರಾರು ಬಗ್ಗೆ ಮುಂದುವರೆಯುವುದಿಲ್ಲವೆಂದು ಹೇಳಿದ್ದಳು. ಕೋಮದಿಗೆ ಹಣ ಕೊಡುವಾಗ ಅವರ ತಮ್ಮ ಶೇಖರ್ ಇದ್ದ. ಬೇರೆ ಯಾರು ಇರಲಿಲ್ಲ. ಸದರಿ ಹಣವನ್ನು ಕೋಮದಿಗೆ ಅವರ ಮನೆಯಲ್ಲಿ ಕೊಟ್ಟಿದ್ದೇನೆ. ಕೋಮದಿಯವರು ಮನೆ ಹಿರಿಯೂರು ಪಟ್ಟಣದ ಹರಿಶ್ಚಂದ್ರ ಘಾಟ್ ನಲ್ಲಿ ಇದೆ. ಕೋಮದಿಯವರ ತಮ್ಮ ಶೇಖರ್ ಗೆ 50 ವರ್ಷ ಆಗಿರುತ್ತದೆ. ಕೋಮದಿಗೆ ಹಣ ಕೊಡಲು ನಾನು ನನ್ನ ಗಂಡ ಇಬ್ಬರು ಹೋಗಿದ್ದೆವು. ಆದರೆ ಸದರಿ ಹಣ ಕೊಟ್ಟ ದಿನಾಂಕ ಅಥವಾ ಇಸವಿ ಹೇಳಲು ಆಗುವುದಿಲ್ಲ. ಕೋಮದಿ, ನಾನು ಮತ್ತು ನನ್ನ ಗಂಡ ಬಹಳ ವಿಶ್ವಾಸಿಗರು ಎಂದರೆ ನಿಜ. ಕೋಮದಿ ನಿಡಿ–1 ರ ಪ್ರಕಾರ ಕೊಟ್ಟ ನೋಟೀಸ್ ಗೆ ನಾವು ಉತ್ತರ ಕೊಟ್ಟಿಲ್ಲ. ಕೋಮದಿ ತನಗೆ ಹಣ ಬೇಕಾಗಿದೆ ಎಂದು ಹೇಳಿದ್ದರಿಂದ ನಾವು ಹಣ ಜೋಡಿಸುತ್ತಿದ್ದೆವು. ಆದ ಕಾರಣ ಉತ್ತರ ಕೊಟ್ಟಿಲ್ಲ. ನಿಡಿ–1 ರ ಒಕ್ಕಣೆ ಬಗ್ಗೆ ನಾನು ವಕೀಲರ ಮೂಲಕ ಓದಿ, ಓದಿಸಿ ತಿಳಿದುಕೊಂಡಿಲ್ಲ.

ವಾದಿ ನಿಡಿ–1 ಕ್ಕೆ ನಿಡಿ–2 ರ ಪ್ರಕಾರ ಕೊಟ್ಟ ಉತ್ತರ ದಾಖಲೆಯನ್ನು ನಾವು ಕೋಮದಿಯಿಂದಲೇ ಪಡೆದು ಈ ದಾವೆಯಲ್ಲಿ ಹಾಜರು ಮಾಡಿದ್ದೇವೆ. ನಿಡಿ–2 ರಲ್ಲಿರುವ ಒಕ್ಕಣೆಗಳ ಬಗ್ಗೆ ನಮ್ಮ ವಕೀಲರ ಮುಖಾಂತರ ತಿಳಿದುಕೊಂಡಿಲ್ಲ. ಕೋಮದಿಗೆ ನಾವು ಬರೆದುಕೊಟ್ಟಿದ್ದೇವೆ ಎಂದು ಹೇಳುವ ಕರಾರಿನ ದಾಖಲೆ ಅಥವಾ ಅದರ ಕಾಪಿ ನಮ್ಮ ಬಳಿ ಇಲ್ಲ.

ನಾನು ನನ್ನ ಗಂಡ ಕೋಮದಿ ಜೊತೆ ಬಹಳ ವಿಶ್ವಾಸದಿಂದ ಇದ್ದ ಕಾರಣ ನಿಡಿ-1 ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ-3 ರ ಪ್ರಕಾರ ವಾದಿ, ನನಗೆ ನನ್ನ ಗಂಡ ಮತ್ತು ಮಕ್ಕಳಿಗೆ ನೋಟೀಸ್ ಕೊಟ್ಟಿದೆ ಎಂದರೆ ಸರಿ. ನಿಪಿ-3 ನನ್ನ ಗಂಡನಿಗೆ ಖುದ್ದು ಜಾರಿಯಾಗಿದೆ ಎಂದರೆ ನಿಜ. ಸಾಕ್ಷಿಗೆ ಚಿನ್ನಸ್ವಾಮಿಗೆ ಜಾರಿ ಆಗಿರುವ ಅಂಚೆ ಸ್ವೀಕೃತಿ ತೋರಿಸಲಾಗಿ ಅದನ್ನು ನೋಡಿ ಅದರಲ್ಲಿರುವ ಸಹಿ ತನ್ನ ಗಂಡನದು ಎಂದು ಒಪ್ಪಿದ್ದರಿಂದ ಅದನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿ ಲಲಿತ ಎಂಬ ಸಹಿ ಇದ್ದು ತನಗೆ ಜಾರಿ ಆಗಿರುವ ಅಂಚೆ ಸ್ವೀಕೃತಿ ತೋರಿಸಲಾಗಿ ಅದನ್ನು ನೋಡಿ ಅದರಲ್ಲಿರುವ ಸಹಿ ತನ್ನದು ಎಂದು ಒಪ್ಪಿದ್ದರಿಂದ ಅದನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಂಜು ಸಿ ಎಂದು ಜಾರಿ ಆಗಿರುವ ಅಂಚೆ ಸ್ವೀಕೃತಿ ತೋರಿಸಲಾಗಿ ಅದನ್ನು ನೋಡಿ ಅದರಲ್ಲಿರುವ ಸಹಿ ತನ್ನ ಮಗನ ಸಹಿ ಎಂದು ಒಪ್ಪಿದ್ದರಿಂದ ಅದನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮದು ಸಿ ಎಂದು ಜಾರಿ ಆಗಿರುವ ಅಂಚೆ ಸ್ವೀಕೃತಿ ತೋರಿಸಲಾಗಿ ಅದನ್ನು ನೋಡಿ ಅದರಲ್ಲಿರುವ ಸಹಿ ತನ್ನ ಮಗನದಲ್ಲ ಎಂದು ತಿಳಿಸುತ್ತಾರೆ. ನಿಪಿ-11 ರಲ್ಲಿರುವ ಮಧು ಸಿ ಸಹಿ ನನ್ನ ಮಗನದು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿಯರು ಸಲ್ಲಿಸಿದ ವಕಾಲತ್ ನಾಮ ತೋರಿಸಿ ಮದು ಸಿ ಎಂದು ಇರುವ ಸಹಿ ನಿಮ್ಮ ಮಗನ್ನದ್ದು ಎಂದರೆ ಸಾಕ್ಷಿ ತನ್ನ ಮಗ ಮದು ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ವಕಾಲತ್ ನಾಮದಲ್ಲಿರುವ 2 ನೇ ಪ್ರತಿವಾದಿಯ ಸಹಿ ಲಲಿತ ಸಿ, ಸಹಿ ತೋರಿಸಿ ಅದು ನಿಮ್ಮ ಸಹಿಯೇ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ. ಸದರಿ ವಕಾಲತ್ ನಾಮೆಯನ್ನು ನಿಪಿ-21 ಎಂದು, ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ನಿಪಿ-21 ರ ಮೇಲಿರುವ ಮಧು ಸಿ ಎಂ ಸಹಿ ನಿಮ್ಮ ಮಗ ಮದು ಮಾಡಿದ್ದಾನೋ ಅಥವಾ ಬೇರೆಯಾರು ಮಾಡಿದ್ದಾರೆ ಎಂದು ಹೇಳಲು ಆಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಸಹಿ ತನ್ನ

ಮಗನದಲ್ಲ ಅದು ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ.

ನನ್ನ ಮಗ ಮದು ಸಿ ಈತನ ಸಹಿ ನೋಡಿದ್ದೇನೆ. ನಿಪಿ–21 ರ ಮೇಲಿರು ಮದು ಸಿ ಎಂಬ ಸಹಿ ನನ್ನ ಮಗ ಮಧು ಮಾಡಿದ್ದಾನೆ ಎಂದರೆ ಸರಿಯಲ್ಲ. ನಿಪಿ–11 ರ ಮೇಲಿರುವ ಮಧು ಸಿ ಎಂಬ ಸಹಿ ನನ್ನ ಮಗ ಮಾಡಿದ್ದಾನೆ ಎಂದರೆ ಸುಳ್ಳು. ನಿಪಿ–3 ನೋಟೀಸ್ ಕೊಟ್ಟ ಸಮಯಕ್ಕೆ ನನ್ನ ಮಗ ಮಧು ಸಿ ವಯಸ್ಕನಾಗಿದ್ದ ಎಂದರ ಇರಬಹುದು.

(**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು**).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.